# ಕರ್ನಾಟಕ ರಾಜ್ಯಪತ್ರ

**ಅಧಿಕೃತವಾಗಿ ಪ್ರಕಟಿಸಲಾದುದು**

## ವಿಶೇಷ ರಾಜ್ಯ ಪತ್ರಿಕೆ

| | | |
|---|---|---|
| ಭಾಗ – ೪ಎ<br>**Part – IVA** | ಬೆಂಗಳೂರು, ಮಂಗಳವಾರ, ೨೪, ಮಾರ್ಚ್, ೨೦೨೬(ಚೈತ್ರ, ೦೩, ಶಕವರ್ಷ, ೧೯೪೮)<br>BENGALURU, TUESDAY , 24, MARCH, 2026(CHAITHRA, 03, SHAKAVARSHA, 1948) | ನಂ. ೨೩೦<br>**No. 230** |


**ಕರ್ನಾಟಕ ಸರ್ಕಾರ**

**ಸಂಖ್ಯೆ: RDPR/201/GPA/2026**

**ಕರ್ನಾಟಕ ಸರ್ಕಾರದ ಸಚಿವಾಲಯ**
ಬಹುಮಹಡಿ ಕಟ್ಟಡ,
ಬೆಂಗಳೂರು ದಿನಾಂಕ:24-03-2026

**<u>ಅಧಿಸೂಚನೆ</u>**

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 (1993ರ ಕರ್ನಾಟಕ ಅಧಿನಿಯಮ ಸಂಖ್ಯೆ 14)ರ 5ನೇ ಪ್ರಕರಣವನ್ನು ಓದಿಕೊಂಡಂತೆ ಪ್ರಕರಣ 311 ರ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿಗಳಲ್ಲಿನ ಸ್ಥಾನಗಳನ್ನು ಆವರ್ತನೆಯ ಮೇಲೆ ಮೀಸಲಿಡುವ) ನಿಯಮಗಳು, 1998 ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಕರ್ನಾಟಕ ಸರ್ಕಾರವು ಈ ಕೆಳಕಂಡ ಕರಡು ನಿಯಮಗಳನ್ನು ಇದರಿಂದ ಬಾಧಿತರಾಗಬಹುದಾದ ಎಲ್ಲಾ ವ್ಯಕ್ತಿಗಳ ಮಾಹಿತಿಗಾಗಿ ಸದರಿ ಅಧಿನಿಯಮದ ಪ್ರಕರಣ 311ರ ಉಪ ಪ್ರಕರಣ (1) ರಲ್ಲಿ ನಿಗದಿಪಡಿಸಿದಂತೆ ಪ್ರಕಟಿಸಲಾಗಿದೆ ಮತ್ತು ರಾಜ್ಯ ಪತ್ರದಲ್ಲಿ ಪ್ರಕಟಣೆಯಾದ ಏಳು ದಿನಗಳ ನಂತರ ಸದರಿ ಕರಡು ನಿಯಮಗಳನ್ನು ಪರಿಗಣನೆಗೆ ತೆಗೆದುಕೊಳ್ಳಲಾಗುವುದೆಂದು ಈ ಮೂಲಕ ಸೂಚಿಸಲಾಗಿದೆ.

ಈ ಕರಡು ನಿಯಮಗಳ ಕುರಿತಂತೆ ಈ ಮೇಲೆ ನಿರ್ದಿಷ್ಟಪಡಿಸಿದ ಅವಧಿಯೊಳಗಾಗಿ ರಾಜ್ಯ ಸರ್ಕಾರವು ಯಾವುದೇ ವ್ಯಕ್ತಿಯಿಂದ ಸ್ವೀಕೃತವಾಗುವ ಯಾವುದೇ ಆಕ್ಷೇಪಣೆ ಮತ್ತು ಸಲಹೆಗಳನ್ನು ರಾಜ್ಯ ಸರ್ಕಾರವು ಪರಿಗಣಿಸುವುದು. ಆಕ್ಷೇಪಣೆ ಮತ್ತು ಸಲಹೆಗಳನ್ನು ಸರ್ಕಾರದ ಕಾರ್ಯದರ್ಶಿ (ಪಂಚಾಯತ್ ರಾಜ್) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿಗಳ ಕಟ್ಟಡ, 3ನೇ ಹಂತ, 3ನೇ ಮಹಡಿ, ಡಾ|| ಅಂಬೇಡ್ಕರ್ ವೀದಿ, ಬೆಂಗಳೂರು-01, ಇವರಿಗೆ ಕಳುಹಿಸಬಹುದಾಗಿದೆ.

**ಕರಡು ನಿಯಮಗಳು**

1. **ಹೆಸರು ಮತ್ತು ಪ್ರಾರಂಭ.**- (1) ಈ ನಿಯಮಗಳನ್ನು ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿಗಳಲ್ಲಿನ ಸ್ಥಾನಗಳನ್ನು ಆವರ್ತನೆಯ ಮೇಲೆ ಮೀಸಲಿಡುವ) (ತಿದ್ದುಪಡಿ) ನಿಯಮಗಳು, 2026 ಎಂದು ಕರೆಯತಕ್ಕದ್ದು.

(2) ಇವು ರಾಜ್ಯಪತ್ರದಲ್ಲಿ ಅಂತಿಮವಾಗಿ ಪ್ರಕಟಿಸಿದ ದಿನಾಂಕದಿಂದ ಜಾರಿಗೆ ಬರುತ್ತದೆ.

2. **"ನಿಯಮ 1 ರ ತಿದ್ದುಪಡಿ.-** ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿಗಳಲ್ಲಿನ ಸ್ಥಾನಗಳನ್ನು ಆವರ್ತನೆಯ ಮೇಲೆ ಮೀಸಲಿಡುವ) ನಿಯಮಗಳು, 1998 (ಇಲ್ಲಿ ಇನ್ನು ಮುಂದೆ ಸದರಿ ನಿಯಮಗಳೆಂದು ಉಲ್ಲೇಖಿಸಲಾಗಿದೆ) , ನಿಯಮ 1 ರಲ್ಲಿನ "ಪಂಚಾಯತ್ ರಾಜ್"" ಎಂಬ ಪದಗಳ ಬದಲಿಗೆ "ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

3. **"ನಿಯಮ 2 ರ ತಿದ್ದುಪಡಿ.-** ಸದರಿ ನಿಯಮಗಳ ನಿಯಮ 2 ರಲ್ಲಿನ ಖಂಡ (ಎ) ರಲ್ಲಿ "ಪಂಚಾಯತ್ ರಾಜ್"", ಎಂಬ ಪದಗಳ ಬದಲಿಗೆ "ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್"" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

4. **ನಿಯಮ 3ರ ತಿದ್ದುಪಡಿ.-** ಸದರಿ ನಿಯಮಗಳ ನಿಯಮ 3ರ ಉಪ ನಿಯಮ (1), (3), (4) ರಲ್ಲಿನ "ರಾಜ್ಯ ಚುನಾವಣಾ ಆಯೋಗದ", ಎಂಬ ಪದಗಳು ಕಂಡುಬರುವ ಕಡೆಗಳಲ್ಲಿ " ಸರ್ಕಾರದ", ಎಂಬ ಪದವನ್ನು ಪ್ರತಿಯೋಜಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಡಾ|| ಎನ್. ನೋಮೇಶ್ ಕುಮಾರ್)
ನಿರ್ದೇಶಕರು (ಪಂ.ರಾಜ್) ಹಾಗೂ
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

Government of Karnataka

No.RDPR 201 GPA 2026

Karnataka Government Secretariat
M.S.Building,
Bengaluru, Dated:24.03.2026

## Notification

In exercise of the powers conferred under Section 5 of the Karnataka Grama Swaraj and Panchayat Raj Act, 1993 (Karnataka Act No. 14 of 1993) read with item 311, and to amend further the Karnataka Panchayat Raj (Reservation of Seats in Grama Panchayats) Rules, 1998, the Government of Karnataka hereby publishes the draft rules for the information of all persons likely to be affected as specified in sub-section (1) of item 311 of the said Act and hereby notifies that the said draft rules shall be taken into consideration after seven days of their publication in the Official Gazette.

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



The State Government shall consider any objections and suggestions received from any person within the period specified above with regard to these draft rules. Objections and suggestions can be sent to the Secretary to the Government (Panchayat Raj), Department of Rural Development and Panchayat Raj, Multi-purpose Building, 3rd Stage, 3rd Floor, Dr. Ambedkar Veedhi, Bengaluru-01.

## Draft Rules

1. **Title and Commencement.-** (1) These rules shall be called the Karnataka Panchayat Raj (Reservation of Seats in Gram Panchayats on Rotation) (Amendment) Rules, 2026.
   (2) They shall come into force from the date of their final publication in the official Gazette.

2. **Amendment of Rule 1.-** In the Karnataka Panchayat Raj (Reservation of Seats in Gram Panchayats on Rotation) Rules, 1998 (hereinafter referred to as the said rules), in Rule 1, the words "Panchayat Raj" shall be substituted with the words "Gram Swaraj and Panchayat Raj".

3. **Amendment of Rule 2.-** In clause (a) of Rule 2 of the said rules, the words "Panchayat Raj" shall be substituted with the words "Gram Swaraj and Panchayat Raj".

4. **Amendment of Rule 3.-** In sub-rules (1), (3), and (4) of Rule 3 of the said rules, wherever the words "State Election Commission" occur, these words shall be substituted with the words "Government".

By order and in the name of the
Governor of Karnataka,

**(Dr. N. Nomesh Kumar)**
Director (Panchayat Raj) and Ex-officio
Deputy Secretary to the Government,
Department of Rural Development and
Panchayat Raj.

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH